## ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:27-01-2021.

2) ಸರ್ಕಾರಿ ಆದೇಶ ಸಂಖ್ಯೆ:ಆಇ 01 ಬಿಪಿಇ 2021, ದಿನಾಂಕ:04.03.2021.

3) ಕಡತ ಸಂಖ್ಯೆ: ಆಇ 26 ವೆಚ್ಚ-6 2021.

* * * * *

**ಪ್ರಸ್ತಾವನೆ:-**

2020-21ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿ:31-03-2021 ರಂದೇ 2020-21ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1) ರ ಸರ್ಕಾರಿ ಆದೇಶಗಳಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

ವೇತನ / ವೇತನ ಬಾಕಿ ಬಿಲ್ಲುಗಳು / ಹಬ್ಬದ ಮುಂಗಡ ಬಿಲ್ಲು / ಅನುದಾನಿತ ವೇತನ ಬಿಲ್ಲುಗಳು/ ಇತರೆ ಅನುದಾನಿತ ಬಿಲ್ಲುಗಳು. ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು / ಪ್ರಯಾಣ ಭತ್ಯೆ ಮತ್ತು ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳನ್ನು ಸಲ್ಲಿಸುವ ದಿನಾಂಕವನ್ನು ಉಲ್ಲೇಖಿತ(2) ರ ಆದೇಶದಲ್ಲಿ ದಿನಾಂಕ:08.03.2021 ರವರೆಗೆ ವಿಸ್ತರಿಸಿ ಆದೇಶಿಸಲಾಗಿದ್ದು, ಇದನ್ನು ಮನಃ 10.03.2021 ರವರೆಗೆ ವಿಸ್ತರಿಸಲು ಖಜಾನೆ ಆಯುಕ್ತರು ತಿಳಿಸಿರುತ್ತಾರೆ.

ಹಾಗೆಯೇ ಮೇಲೆ (3) ರಲ್ಲಿ ಒದಲಾದ ಕಡತದಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಗಳಿಗೆ ಸಂಬಂಧಿಸಿದಂತೆ ಆಬ್ಜೆಕ್ಟ್ ಹೆಡ್ 005, 101, 033, 251 ಮತ್ತು 021 ರಡಿಯಲ್ಲಿ ಬಿಲ್ಲುಗಳನ್ನು ಸಲ್ಲಿಸಲು ದಿನಾಂಕವನ್ನು 15.03.2021 ರವರೆಗೆ ವಿಸ್ತರಿಸಲು ಕೋರಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ಬೆಂಗಳೂರು, ದಿನಾಂಕ:08-03-2021**

ಈ ಕೆಳಕಂಡ ವೆಚ್ಚಗಳಿಗೆ ಸಂಬಂಧಿಸಿದಂತೆ ಈಗಾಗಲೇ ನಿಗಧಿಪಡಿಸಿರುವ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಿ ಆದೇಶಿಸಿದೆ.

| ಬಿಲ್ಲುಗಳ ಸ್ವರೂಪ / ವಿವರಗಳು | 31-01-2021ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ **upload** ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ: ದಿ:04/03/2021ರ ಆದೇಶದ ಪ್ರಕಾರ ನಿಗಧಿಪಡಿಸಲಾದ ಕೊನೆಯ ದಿನಾಂಕ | ವಿಸ್ತರಿಸಿರುವ ದಿನಾಂಕ | 31-01-2021ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ |
|---|---|---|---|
| 1)ವೇತನ / ವೇತನ ಬಾಕಿ ಬಿಲ್ಲುಗಳು / ಹಬ್ಬದ ಮುಂಗಡ ಬಿಲ್ಲುಗಳು / ಅನುದಾನಿತವೇತನ ಬಿಲ್ಲುಗಳು / ಇತರೆ ಅನುದಾನಿತ ಬಿಲ್ಲುಗಳು. | 08.03.2021 | **12.03.2021** | - |

| | | | |
|---|---|---|---|
| 2)ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು. | 08.03.2021 | **12.03.2021** | – |
| 3)ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು. | 08.03.2021 | **12.03.2021** | – |
| 4)ZP/TP ಗೆ ಸಂಬಂಧಿಸಿದಂತೆ ಆಬ್ಜೆಕ್ಟ್ ಹೆಡ್ 005, 101, 033, 251 ಮತ್ತು 021 ರಡಿಯಲ್ಲಿ ಬಿಲ್ಲುಗಳನ್ನು ಸಲ್ಲಿಸುವ ದಿನಾಂಕ | – | – | **15.03.2021** |

ಮೇಲ್ಕಂಡ ಬಿಲ್ಲುಗಳನ್ನು ಹೊರತುಪಡಿಸಿ ಉಳಿದ ಬಿಲ್ಲುಗಳನ್ನು ಸಲ್ಲಿಸಿಲು ಸರ್ಕಾರದ ಆದೇಶ ಸಂಖ್ಯೆ: ಆಇ 01 ಬಿಪಿಇ 2021 ಬೆಂಗಳೂರು, ದಿನಾಂಕ:27.01.2021 ರಲ್ಲಿ ನಿಗಧಿಗೊಳಿಸಲಾಗಿದ್ದ ಕಾಲಮಿತಿಯು ಮುಂದುವರೆಯುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ **www.finance.karnataka.gov.in** ನಿಂದ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/3/2021
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಎಫ್.ಆರ್ ಮತ್ತು ಬಿಸಿಸಿ).

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು (A&E) / (G&SSA) / (E&RSA), ಕರ್ನಾಟಕ, ಬೆಂಗಳೂರು.
2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
5) ಸರ್ಕಾರದ ಎಲ್ಲಾ ಅಪರ / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.